ಕರ್ನಾಟಕ ಸರ್ಕಾರ
(ಮೀನುಗಾರಿಕೆ ಇಲಾಖೆ)
ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ಡಾ: ಅಂಬೇಡ್ಕರ್ ವೀಧಿ,ಬೆಂಗಳೂರು-01 ದೂರವಾಣಿ ಸಂಖ್ಯೆ: 080-22864681,
ಇಮೆಲ್: dfkarnataka@rediffmail.com

---

ಸಂಖ್ಯೆ/DOF-TECH0INL/22/2022 ;E-761217 ದಿನಾಂಕಃ 26-09-2022

**ಜ್ಞಾಪನಾ ಪತ್ರ**

ವಿಷಯ: 2022-23 ನೇ ಸಾಲಿನಲ್ಲಿ "ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಉಚಿತವಾಗಿ ಮೀನುಮರಿ ಬಿತ್ತನೆ" ಯೋಜನೆಯಡಿ ಬಲಿತ ಬಿತ್ತನೆ ಮೀನುಮರಿಗಳನ್ನು ದಾಸ್ತಾನು ಮಾಡಲು ಸರಬರಾಜುದಾರರ ಪಟ್ಟಿಯನ್ನು (Empanelled list) ಅಂತಿಮಗೊಳಿಸುವ ಬಗ್ಗೆ

ಉಲ್ಲೇಖ:1.ಸರ್ಕಾರದ ಆದೇಶ ಸಂಖ್ಯೆ/ಪಸಂಮೀ ಇ-117 ಮೀಇಯೋ 2022, ಬೆಂಗಳೂರು, ದಿನಾಂಕ:07-04-2022
2.ಮೀನುಗಾರಿಕೆ ಜಂಟಿ ನಿರ್ದೇಶಕರು, ಬಳ್ಳಾರಿ ರವರ ಪತ್ರ ಸಂಖ್ಯೆ/ಗ್ರಾ.ಕೆ.ಮೀ.ಮ.ಬಿ: 01:2022,ದಿನಾಂಕ:22-06-2022,30-06-2022,13-07-2022 ಮತ್ತು 22-07-2022
3.ಈ ಕಛೇರಿ ಪತ್ರ ಸಮ ಸಂಖ್ಯೆ: ದಿನಾಂಕ: 04-08-2022

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022-23 ನೇ ಸಾಲಿನಲ್ಲಿ "ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಉಚಿತವಾಗಿ ಮೀನುಮರಿ ಬಿತ್ತನೆ" ಯೋಜನೆಯಡಿ ಪ್ರತೀ ಕೆರೆಗೆ ಉಪಯುಕ್ತ ಜಲವಿಸ್ತೀರ್ಣಕ್ಕನುಗುಣವಾಗಿ ಗರಿಷ್ಟ ರೂ.10,000-00 ಮೌಲ್ಯದ ಬಲಿತ ಬಿತ್ತನೆ ಮೀನುಮರಿಗಳನ್ನು 5650 ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ದಾಸ್ತಾನು ಮಾಡಲು ರೂ. 5.65 ಕೋಟಿ ಅನುದಾನ ನಿಗದಿಪಡಿಸಲಾಗಿದೆ.

ಮೀನುಮರಿಗಳನ್ನು ಸರಬರಾಜು ಮಾಡಲು ಆಸಕ್ತಿಯಿರುವ ನೊಂದಾಯಿತ ಮೀನುಮರಿ ಸರಬರಾಜುದಾರರಿಂದ ಆಸಕ್ತಿ ವ್ಯಕ್ತಪಡಿಸಿ ಕೇಂದ್ರ ಕಚೇರಿಯಿಂದ ಅರ್ಜಿ ಆಹ್ವಾನಿಸಲಾಗಿರುತ್ತದೆ. ಅದರಂತೆ ದಿನಾಂಕ: 25-08-2022 ರೊಳಗೆ ಅರ್ಜಿ ಸಲ್ಲಿಸಿ ಮೀನುಮರಿ ಸರಬರಾಜು ಮಾಡಲು ಆಸಕ್ತಿಯಿರುವ ಸರಬರಾಜುದಾರರ ಪಟ್ಟಿಯನ್ನು ಮೀನುಮರಿಗಳ ಖರೀದಿ ವಿವರಗಳೊಂದಿಗೆ ಉಲ್ಲೇಖ (2) ರಲ್ಲಿನ ಪತ್ರದಲ್ಲಿ ಮೀನುಗಾರಿಕೆ ಜಂಟಿ ನಿರ್ದೇಶಕರು, ಬಳ್ಳಾರಿ ರವರು ಸಲ್ಲಿಸಿರುತ್ತಾರೆ.

ಅದರಂತೆ ಬಳ್ಳಾರಿ ವಲಯದ ಜಿಲ್ಲೆಗಳಲ್ಲಿ ಆಯ್ಕೆ ಮಾಡಲಾದ ಗ್ರಾಮ ಪಂಚಾಯಿತಿ ಕೆರೆಗಳಿಗೆ ಬಲಿತ ಬಿತ್ತನೆ ಮೀನುಮರಿಗಳನ್ನು ದಾಸ್ತಾನು ಮಾಡಲು, ಉಲ್ಲೇಖ (3) ರ ಪತ್ರದಲ್ಲಿ ಈಗಾಗಲೇ ಸರಬರಾಜು ಆದೇಶ ನೀಡಲಾಗಿರುತ್ತದೆ. ಬಾಕಿ ಉಳಿದ ಸರಬರಾಜುದಾರರ ಪಟ್ಟಿಯನ್ನು (Empanelled list) ಖರೀದಿಸಬೇಕಾದ ಮೀನುಮರಿಗಳ ವಿವರಗಳೊಂದಿಗೆ ಅಂತಿಮಗೊಳಿಸಿ ಈ ಪತ್ರದೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲಾಗಿದೆ.

ಮೀನುಮರಿಗಳನ್ನು ದಾಸ್ತಾನು ಮಾಡಲು ಸರಬರಾಜು ಆದೇಶವನ್ನು **ಮೀನುಗಾರಿಕೆ ಜಂಟಿ ನಿರ್ದೇಶಕರು ರವರು ಈ ಆದೇಶದ ದಿನಾಂಕದಿಂದ ಒಂದು ವಾರದೊಳಗಾಗಿ ನೀಡಿ, ಮೀನುಮರಿಗಳ ದಾಸ್ತಾನು ಪ್ರಕ್ರಿಯೆಯನ್ನು ದಿನಾಂಕ: 20-10-2022 ರೊಳಗೆ ಪೂರ್ಣಗೊಳಿಸಲು ಸೂಚಿಸಿದೆ.** ಹಾಗೂ ಸರ್ಕಾರದ ಆದೇಶ ಸಂಖ್ಯೆ/ಪಸಂಮೀ ಇ-117 ಮೀಇಯೋ 2022, ಬೆಂಗಳೂರು,

ದಿನಾಂಕ:07-04-2022 ರಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಂತೆ ಯೋಜನೆ ಅನುಷ್ಠಾನಗೊಳಿಸಲು ತಿಳಿಸಿದೆ.

ಸರ್ಕಾರದ ಆದೇಶ ಸಂಖ್ಯೆ/ಪಸಂಮೀ ಇ-117 ಮೀಇಯೋ 2022,ಬೆಂಗಳೂರು, ದಿನಾಂಕ:07-04-2022 ರ ಅನುಬಂಧ-2 ರಲ್ಲಿ ಪಾಲಿಸಬೇಕಾದ ಷರತ್ತು ಮತ್ತು ನಿಬಂದನೆಗಳ ಕ್ರಮ ಸಮಖ್ಯೆ (5) ರಲ್ಲಿ ಕಟ್ಲಾ ಮತ್ತು ಸಾಮಾನ್ಯಗೆಂಡೆ ಜಾತಿಯ ಮೀನುಮರಿಗಳನ್ನು ಶೇ. 50:50 ರ ಅನುಪಾತದಲ್ಲಿ ದಾಸ್ತಾನು ಮಾಡತಕ್ಕದ್ದು ಎಂದು ತಿಳಿಸಲಾಗಿದೆ. ಆದರೆ ಮೀನುಮರಿ ಸರಬರಾಜು ಮಾಡಲು ಆಸಕ್ತಿ ವ್ಯಕ್ತಪಡಿಸಿ ಬಂದಿರುವ ಅರ್ಜಿಗಳಲ್ಲಿ ಹೆಚ್ಚಿನ ಸಂಖ್ಯೆಯ ಮೀನುಕೃಷಿಕರು ಕಟ್ಲಾ ಜಾತಿಯ ಮೀನುಮರಿಗಳನ್ನು ಸರಬರಾಜು ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. **ಆದ್ದರಿಂದ ತಮ್ಮ ವಲಯಕ್ಕೆ ನೀಡಲಾಗಿರುವ ಸರಬರಾಜು ಆದೇಶದಲ್ಲಿನ ಮೀನುಮರಿಗಳ ಸಂಖ್ಯೆಗನುಗುಣವಾಗಿ ಕಟ್ಲಾ ಮತ್ತು ಸಾಮಾನ್ಯಗೆಂಡೆ ಜಾತಿಯ ಮೀನುಮರಿಗಳ ಅನುಪಾತವನ್ನು ನಿರ್ಧರಿಸಿ ಒಂದು ಕೆರೆಗೆ ಗರಿಷ್ಟ ರೂ.10,000/- ಮೌಲ್ಯದ ಬಲಿತ ಬಿತ್ತನೆ ಮೀನುಮರಿಗಳನ್ನು ದಾಸ್ತಾನು ಮಾಡತಕ್ಕದ್ದು.**

ದಾಸ್ತಾನು ಮಾಡಬೇಕಾದ ಜಿಲ್ಲಾ/ವಲಯವಾರು ಬಲಿತ ಬಿತ್ತನೆ ಮೀನುಮರಿಗಳ ವಿವರವನ್ನು ಮಾಹಿತಿಗಾಗಿ ರವಾನಿಸಿದೆ.

ಸಹಿ/-
ಮೀನುಗಾರಿಕೆ ನಿರ್ದೇಶಕರು

ಅಡಕ:ಸರಬರಾಜುದಾರರ ಪಟ್ಟಿ

ಗೆ:

ಮೀನುಗಾರಿಕೆ ಜಂಟಿ ನಿರ್ದೇಶಕರು, ಬಳ್ಳಾರಿ,

ಪ್ರತಿ ಮೀನುಗಾರಿಕೆ ಉಪ ನಿರ್ದೇಶಕರು ಬಳ್ಳಾರಿ/ರಾಯಚೂರು/ಕೊಪ್ಪಳ/ಕಲಬುರ್ಗಿ/ಯಾದಗಿರಿ/ಬೀದರ್ ರವರಿಗೆ ಸೂಕ್ತ ಕ್ರಮಕ್ಕಾಗಿ

27/9/22
ಮೀನುಗಾರಿಕೆ ನಿರ್ದೇಶಕರ ಪರವಾಗಿ

ಕರ್ನಾಟಕ ಸರ್ಕಾರ
(ಮೀನುಗಾರಿಕೆ ಇಲಾಖೆ)

## "ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಉಚಿತವಾಗಿ ಮೀನುಮರಿ ಬಿತ್ತನೆ" ಯೋಜನೆಯಡಿ ಬಲಿತ ಬಿತ್ತನೆ ಮೀನುಮರಿ ದಾಸ್ತಾನು ದೃಢೀಕರಣ ಪತ್ರ

ಮೀನುಗಾರಿಕೆ ಜಂಟಿ ನಿರ್ದೇಶಕರು, ........................ ರವರ ಆದೇಶ ಸಂ.____________ ____________ ದಿನಾಂಕ ____________________ ಅನುಸಾರ ಇಂದು ಅಂದರೆ ದಿನಾಂಕ: ____________ ರಂದು ____________________ ಸಮಯದಲ್ಲಿ ____________________________ ____________________ ________________________________________ ರವರಿಂದ ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಲಾಗಿರುವ ಬಲಿತ ಮೀನುಮರಿಗಳನ್ನು ಸ್ವೀಕರಿಸಲಾಗಿದೆ.

| ತಳಿಗಳು | ಗಾತ್ರ (ಮಿ.ಮೀ) ಇಂದ | ವರೆಗೆ | ಸರಾಸರಿ (ಮಿ.ಮೀ) | ಪ್ರಮಾಣ | ಷರಾ |
|---|---|---|---|---|---|
| 1) ಕಟ್ಲಾ | | | | | |
| 2) ಸಾಮಾನ್ಯ ಗೆಂಡೆ | | | | | |
| **ಒಟ್ಟು** | | | | | |

ಈ ಮೇಲ್ಕಂಡ ಮೀನುಮರಿಗಳನ್ನು __________ ಗ್ರಾಮ ಪಂಚಾಯಿತಿಯ ______________________________ ಕೆರೆಯಲ್ಲಿ ಈ ಪುಟದ ಹಿಂಬದಿಯಲ್ಲಿ ಸಹಿ ಮಾಡಿರುವ ಮೀನುಮರಿ ದಾಸ್ತಾನು ಸಮಿತಿಯ ಸಮ್ಮುಖದಲ್ಲಿ ದಾಸ್ತಾನು ಮಾಡಲಾಗಿದೆಯೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :

ದಾಸ್ತಾನು ಪಡೆದ ಉಸ್ತುವಾರಿ
ಅಧಿಕಾರಿಯ ಸಹಿ ಮತ್ತು ಮೊಹರು

ಮೀನು ಮರಿಗಳನ್ನು ನಮ್ಮ ಸಮ್ಮುಖದಲ್ಲಿ ದಾಸ್ತಾನು ಮಾಡಲಾಗಿದೆ. ಹಾಗೂ ಬಿತ್ತನೆ ಮಾಡಲಾದ ಮೀನು ಮರಿಗಳ ಗಾತ್ರ ಮತ್ತು ಪ್ರಮಾಣ ಸರಿಯಾಗಿದೆಯೆಂದು ದೃಢೀಕರಿಸುತ್ತೇವೆ.

| **ಮೀನುಮರಿ ದಾಸ್ತಾನು ಸಮಿತಿ ಸದಸ್ಯರು** | |
|---|---|
| ಮೀನುಗಾರಿಕೆ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ<br>(ಸಹಿ ಮತ್ತು ಹೆಸರು) | ತಾಲ್ಲೂಕು ಮಟ್ಟದ ಅಧಿಕಾರಿ<br>(ಸಹಿ ಮತ್ತು ಹೆಸರು) |
| ಗ್ರಾಮ ಪಂಚಾಯಿತಿ ಅಧ್ಯಕ್ಷರು/ಸದಸ್ಯರು<br>(ಸಹಿ ಮತ್ತು ಹೆಸರು) | ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ<br>(ಸಹಿ ಮತ್ತು ಮೊಹರು) |
| | |
| ಜನ ಪ್ರತಿನಿಧಿಗಳು/ಸಾರ್ವಜನಿಕರ ಸಹಿ: | |
| | |

**ಅನುಬಂಧ-1**

**2022-23 ನೇ ಸಾಲಿನಲ್ಲಿ "ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಉಚಿತವಾಗಿ ಮೀನುಮರಿ ಬಿತ್ತನೆ" ಯೋಜನೆಯಡಿ ಬಲಿತ ಬಿತ್ತನೆ ಮೀನುಮರಿಗಳನ್ನು ದಾಸ್ತಾನು ಮಾಡಲು ಅಂತಿಮಗೊಳಿಸಿದ ಸರಬರಾಜುದಾರರ ಪಟ್ಟಿ (Empanelled list)**

**ವಲಯ: ಬಳ್ಳಾರಿ**

| ಕ್ರ ಸಂ | ಹೆಸರು ಶ್ರೀ/ಶ್ರೀಮತಿ | ಮೀನುಮರಿ ಪಾಲನಾ ಕೇಂದ್ರದ ಹೆಸರು | ಮೊಬೈಲ್ ಸಂಖ್ಯೆ | ಖರೀದಿಸಬೇಕಾದ ಬಲಿತ ಬಿತ್ತನೆ ಮೀನುಮರಿಗಳ ಸಂಖ್ಯೆ(ಲಕ್ಷಗಳಲ್ಲಿ) | | |
|---|---|---|---|---|---|---|
| | | | | ಕಾಟ್ಲ | ಸಾಮಾನ್ಯ ಗೆಂಡೆ | ಒಟ್ಟು |
| 1 | ಶ್ರೀ.ಕೆ.ಸೂರ್ಯನಾರಾಯಣ ಬಿನ್ ನಾಗೇಶ್ವರರಾವ್,ಅಮರೇಶ್ವರ ಕ್ಯಾಂಪ್, ರಾಯಚೂರು | ಕೆ.ಸೂರ್ಯನಾರಾಯಣ ಮೀನುಮರಿ ಪಾಲನಾ ಕೇಂದ್ರ, | 9448804875 | 0.64 | 0.36 | 1.00 |
| 2 | ಶ್ರೀ.ಕೆ.ಲೋಕೇಶ ಬಿನ್ ಕೆ.ಸೂರ್ಯನಾರಾಯಣ,ಅಮರೇಶ್ವರ ಕ್ಯಾಂಪ್, ರಾಯಚೂರು | ಕೆ.ಲೋಕೇಶ ಮೀನುಮರಿ ಪಾಲನಾ ಕೇಂದ್ರ, | 9640701234 | 0.82 | 0.18 | 1.00 |
| 3 | ಶ್ರೀಮತಿ.ಕೆ.ಉಷಾರಾಣಿ ಕೋಂ ಕೆ.ಸೂರ್ಯನಾರಾಯಣ, ಅಮರೇಶ್ವರ ಕ್ಯಾಂಪ್, ರಾಯಚೂರು | ಕೆ.ಉಷಾರಾಣಿ, ಮೀನುಮರಿ ಪಾಲನಾ ಕೇಂದ್ರ, | 9448804875 | 0.82 | 0.18 | 1.00 |
| 4 | ಶ್ರೀಮತಿ. ಕೆ.ದೇವಿಕಾದೇವಿ ಬಿನ್ ನಾಗೇಶ್ವರರಾವ್, ಅಮರೇಶ್ವರ ಕ್ಯಾಂಪ್, ರಾಯಚೂರು | ಕೆ.ದೇವಿಕಾದೇವಿ,ಮೀನುಮರಿ ಪಾಲನಾ ಕೇಂದ್ರ, | 0 | 0.18 | 0.18 | 0.36 |
| 5 | ಶ್ರೀ.ಪವಾಡಿ ದೇವೇಂದ್ರಪ್ಪ ಬಿನ್ ಪವಾಡಿ ಗಂಗಪ್ಪ, ಹರಪನಹಳ್ಳಿ ತಾ, ವಿಜಯನಗರ ಜಿಲ್ಲೆ | ದೇವೇಂದ್ರಪ್ಪ ಫಿಶ್ ಫಾರಂ | 9986122770 | 0.50 | 0.50 | 1.00 |
| **ಒಟ್ಟು** | | | | **2.96** | **1.40** | **4.36** |

ಮೀನುಗಾರಿಕೆ ನಿರ್ದೇಶಕರ ಪರವಾಗಿ